# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/486/10-11

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

ದಿನಾಂಕ :12-08-2016

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಟಿ. ಮಹಾದೇವ ರಾವು ತಂದೆ ಪೆದ್ದ ಈರಣ್ಣ ರಾವು, ಮಂಜುನಾಥ ನಿಲಯಂ, 7ನೇ ಕ್ರಾಸ್, ಪಟೇಲನಗರ, ಬಳ್ಳಾರಿ<br><br>**(ಶ್ರಿ ಬಿ. ಪರ್ವತ ರೆಡ್ಡಿ, ವಕೀಲರು, ಬಳ್ಳಾರಿ)** | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | **ವಿಸ್ತೀರ್ಣ (ಎಕರೆಗಳಲ್ಲಿ)** |
|---|---|---|---|
| ಬಳ್ಳಾರಿ | ಬಳ್ಳಾರಿ | 989/ಎ/ಎ | 30X40 |

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು, ಬಳ್ಳಾರಿ ಇವರ ಹಿಂಬರಹ ಸಂ/ಕಂ/ಪಹಣಿ/470/10-11 ದಿನಾಂಕ 15/10/2010 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 07-06-2011, 19-07-2011, 13-07-2012, 15-01-2013, 25-06-2013, 27-05-2016 ಮತ್ತು 12-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ವಕೀಲರು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಬಳ್ಳಾರಿ ಗ್ರಾಮದ ಸ.ನಂ 989/ಎ/ಎ ವಿಸ್ತೀರ್ಣ: 30X40 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಬಳ್ಳಾರಿ ಇವರ ಹಿಂಬರಹ ಸಂ/ಕಂ/ಪಹಣಿ/470/10-11 ದಿನಾಂಕ 15-10-2010 ನ್ನು ಪ್ರಶ್ನಿಸುತ್ತಾ ಸದರಿ ವಿವಾದಾಸ್ಪದ ಜಮೀನನ್ನು ವಾದಿಗಳು ನೊಂದಾಯಿತ ಕ್ರಯ ಪತ್ರ ಸಂಖ್ಯೆ 3093/68-69 ದಿನಾಂಕ 02-11-1968 ರಲ್ಲಿ ಶ್ರೀ ಗುರುಮುಖ್ ಸಿಂಗ್ ಇವರಿಂದ ಖರೀದಿಸಿದ್ದು, ಸದರಿ ಕ್ರಯ ಪತ್ರದಂತೆ ಹಕ್ಕು ಬದಲಾವಣೆ ಮಾಡುವಂತೆ ಕೋರಿತ್ತಾರೆ. ಮುಂದುವರೆದು ಪ್ರಕರಣದಲ್ಲಿನ ಲಭ್ಯದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿ ಜಮೀನು 30X40 ನಿವೇಶನ ಪ್ಲಾಟ್ ಆಗಿದ್ದು, ಕ್ರಯಪತ್ರದಿಂದ ತಿಳಿದು ಬರುತ್ತದೆ. ಇದು Twon & Country Planing Act ನ್ನು ಮತ್ತು ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 95 ಉಲ್ಲಂಘನೆ ಮಾಡಿ ಖರೀದಿಸಿದ ಆಸ್ತಿಯು ಸರಕಾರದಿಂದ ಹಕ್ಕುದಾಖಲೆ ಮಾಡಿಲ್ಲದಿರುವುದು ಕಂಡುಬಂದಿರುತ್ತದೆ. ಕಾರಣ ಈ ಕೆಳಕಂಡಂತೆ ಆದೇಶ

:: ಆದೇಶ ::

**ಮೇಲ್ಮನವಿಯನ್ನು ತಿರಸ್ಕರಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಬಳ್ಳಾರಿ ಗ್ರಾಮದ ಸ.ನಂ 989/ಎ/ಎ ವಿಸ್ತೀರ್ಣ: 30X40 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಖರೀದಿಸಿದ ಜಮೀನು 30X40 ನಿವೇಶನ ಪ್ಲಾಟ್ ಆಗಿದ್ದು Twon & Country Planing Act ನ್ನು ಮತ್ತು ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 95 ಉಲ್ಲಂಘನೆ ಕಂಡುಬಂದಕಾರಣ ಮೇಲ್ಮನವಿ ವಜಾಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: **12-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಸಹಾಯಕ ಆಯುಕ್ತರು
ಬಳ್ಳಾರಿ.

ಪ್ರತಿಯನ್ನು: ವಾದಿಗಳಿಗೆ ಸಲ್ಲಿಸಿದೆ.